ಹೊಸದನ್ನು ಕಳುಹಿಸಬೇಕೆಂದಾಗ ಹೊಸ ಮೆಷಿನ್ ಕೂಡ ಕಳುಹಿಸಿ ಕೊಟ್ಟಿದ್ದೇವೆ. ಕೇಬಲ್ ಕೂಡ ಜಾಯಿಂಟ್ ಮಾಡಿ ಪವರ್ ರೆಸ್ಟೋರ್ ಮಾಡುತ್ತಾರೆ. ಈಗ ಲೈನ್ ಎಲ್ಲಾ ಸರಿಯಾಗಿ ಇದೆ. ಮೆಟೀರಿಯಲ್ಸ್ ಕೂಡ ಅಲ್ಲಿಗೆ ಕಳುಹಿಸಿ ಕೊಟ್ಟಿದ್ದೇವೆ. ನಿನ್ನೆ ಅದನ್ನು ನನ್ನ ಗಮನಕ್ಕೆ ತಂದಾಗ ನಾನು ಅಧಿಕಾರಿಗಳನ್ನು ಕರೆದು ಮಾತನಾಡಿದ್ದೇನೆ. ಇವತ್ತು ಸಂಜೆಯವರೆಗೆ ಕ್ಲಿಯರ್ ಮಾಡಿ ಕೇಬಲ್ ಹಾಕಿಸಿ ಕೆಲಸ ಮಾಡಿ ಕೊಡುತ್ತೇವೆ ಎನ್ನುವ ಭರವಸೆಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಕೊಡಲು ಇಚ್ಛಿಸುತ್ತೇನೆ.

ಕರ್ನಾಟಕ – ಮಹಾರಾಷ್ಟ್ರ ಗಡಿ ಸಮಸ್ಯ ಕುರಿತು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ನಾನು ಹೋದವಾರ ಒಂದು ಪ್ರಶ್ನೆಯನ್ನು ಕೇಳಬೇಕೆಂದು ಇದ್ದೆ, ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ಈಗ ಕೇಳುತ್ತೇನೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ಮನೋಹರ್ ಜೋಷಿಯವರು ಈಗಿರುವ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಶರದ್‌ಪವಾರ್ ಮುಖಂಡತ್ವದಲ್ಲಿ ಆ ನಿಯೋಗ ಹೋಗಿ ಭೇಟಿ ಮಾಡಿದೆ. ಗಡಿಯ ಸಮಸ್ಯೆಯನ್ನು ಕೂಡಲೇ ಬಗೆಹರಿಸುವುದಕ್ಕೆ ಕ್ರಮ ಕೈಗೊಳ್ಳುವುದಕ್ಕೆ ಅವರು ಕೇಳಿದ್ದಾರೆ. ನಮ್ಮ ಮೇಲೆ ಕೆಲವೊಂದು ಆರೋಪ ಮಾಡಿದ್ದಾರೆ. ಮಹಾರಾಷ್ಟ್ರದ ಗಡಿಯಲ್ಲಿರುವವರಿಗೆ ತೊಂದರೆ ಕೊಡುತ್ತಿದ್ದೇವೆಂದು ಆರೋಪ ಮಾಡಿದ್ದಾರೆ. ನಮ್ಮಿಂದ ಅವರಿಗೆ ಏನೂ ತೊಂದರೆ ಇಲ್ಲ, ತೊಂದರೆ ಆಗುತ್ತಿರುವುದು ಮಹಾರಾಷ್ಟ್ರದ ಗಡಿಯಲ್ಲಿ ಕನ್ನಡಿಗರಿಗೆ ನಿಜವಾಗಿಯೂ ತೊಂದರೆ ಆಗಿದೆ. ಕಾಸರಗೋಡು ಬೇರೆ ವಿಷಯ. ಕೇರಳದಲ್ಲಿ ತೊಂದರೆ ಆಗಿದೆ. ತಾಳವಾಡಿಯಲ್ಲಿ ತೊಂದರೆ ಆಗಿದೆ. ಈ ಕಡೆ ಹೊಸೂರಿನಲ್ಲಿ ತೊಂದರೆ ಆಗಿದೆ. ಈ ರೀತಿ ಹೊರನಾಡಿನ ಕನ್ನಡಿಗರಿಗೆ ನಿರಂತರವಾಗಿ ತೊಂದರೆ ಆಗಿದೆ. ಈ ಬಗ್ಗೆ ಸ್ಪಷ್ಟವಾದಂಥ ನಿರ್ಧಾರ ಒಂದು ಸಮೀಕ್ಷೆ ಆಗಿಲ್ಲ. ಹೊರನಾಡು ಕನ್ನಡ ಪ್ರದೇಶದಲ್ಲಿರುವ ಕನ್ನಡಿಗರಿಗೆ ಕನ್ನಡದ ಪಠ್ಯ ಪುಸ್ತಕ ಮತ್ತು ಕನ್ನಡಿಗರಿಗೆ ಉದ್ಯೋಗ ಇಲ್ಲ. ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ ಮತ್ತೆ ಆ ವಿಷಯವನ್ನು ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ಇದು ಸ್ಥಗಿತವಾಗಿದೆ ಎಂದು ನಾವು ತಿಳಿದುಕೊಂಡಿದ್ದೆವು. ನಮ್ಮ ನಿಲುವು ಮಹಾಜನ ವರದಿಯಲ್ಲಿ ಸ್ಪಷ್ಟ. ಇದು ಹಿಂದೆ ಅನೇಕ ಸಲ ಬಂದಿದೆ. ತಾವು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು ಒಂದು ನಿಯೋಗ ಕರೆದುಕೊಂಡು ಹೋಗುತ್ತಿರೋ ಅಥವಾ ತಾವೇ ಹೋಗಿ ಈ ಬಗ್ಗೆ ಮಾತುಕತೆ ಆಡುತ್ತಿರೋ ಎಂಬ ಬಗ್ಗೆ ಸರ್ಕಾರದ ನಿಲುವು ಏನು ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್(ಮುಖ್ಯಮಂತ್ರಿಗಳು) : ಪ್ರಧಾನ ಮಂತ್ರಿಗಳಾದರೂ ತಿಳಿಸಬೇಕು ಮುಖ್ಯಮಂತ್ರಿಗಳಾದರೂ ತಿಳಿಸಬೇಕು. ಈ ವಿಷಯವನ್ನು ಚರ್ಚೆ ಮಾಡೋಣವೆಂದು ಯಾರಾದರೂ ತಿಳಿಸುತ್ತಾರೆ. ನಾನು ಏಕೆ ಪ್ರೋವೋಕ್ ಮಾಡುವುದಕ್ಕೆ ಹೋಗಲಿ. ಗಡಿಯ ಬಗ್ಗೆ ಮತ್ತು ನಮ್ಮ ಹಕ್ಕುಗಳ ರಕ್ಷಣೆಯ ಬಗ್ಗೆ ಇಡೀ ಸದನ ಒಂದಾಗಿದೆ, ಎಂಬುದು ನನಗೆ ಗೊತ್ತು. Nobody has sent any information. ಸದನದಲ್ಲಿ ಅವರಿಗೆ ತಿಳಿದ ಮಾಹಿತಿಯ ಪ್ರಕಾರ ಹೇಳಿದರೇ ಹೊರತು ನನಗೆ ಯಾರೂ ಏನನ್ನೂ ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಸಾಕಷ್ಟು ಪತ್ರಿಕೆಗಳಲ್ಲಿ ಬಂದಿದೆ. ತಾವೂ ನೋಡಿದ್ದೀರಿ.

ಶ್ರೀ ವೈಜ್‌ನಾಥ ಪಾಟೀಲ್ : ಅಂದಾಜು ಸಮಿತಿಯ ವರದಿಯನ್ನು ನಾನು ಏನು ಕೊಟ್ಟಿದ್ದೇನೆ ಅದನ್ನು ತೋರಿಸಿ ಎಂದು ಮಾನ್ಯ ಸದಸ್ಯರು ಕೇಳಿರುವುದು, ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು : ಈಗ ಅದರ ಬಗ್ಗೆ ಚರ್ಚೆಗೆ ಅವಕಾಶವಿಲ್ಲ.

ಶ್ರೀ ವೈಜನಾಥ ಪಾಟೀಲ್ : ಆ ವಿಚಾರ ಕಡತಕ್ಕೆ ಹೋದ ಮೇಲೆ ನಾನು ಅದಕ್ಕೆ ಉತ್ತರವನ್ನು ನೀಡಬೇಕಾಗುತ್ತದೆ.

ಅಧ್ಯಕ್ಷರು : ಅದರ ಬಗ್ಗೆ ನಾನೇ ಕ್ಲಾರಿಫೈ ಮಾಡಿದೆನಲ್ಲಾ.

ಶ್ರೀ ವೈಜನಾಥ್ ಪಾಟೀಲ್ : ಕ್ಲಾರಿಫೈ ಮಾಡಿರುವ ಬಗ್ಗೆ ಯಾವ ಪತ್ರಿಕೆಯಲ್ಲೂ ಬಂದಿಲ್ಲ.

ಅಧ್ಯಕ್ಷರು : ಈಗ ಹೇಳುವುದಕ್ಕೆ ಅವಕಾಶವಿಲ್ಲ. ಸರ್ಕಾರವು ಅಂದಾಜು ಸಮಿತಿಯ ಬಗ್ಗೆ ನಾನೇ ಚರ್ಚೆ ಮಾಡಲು ಮೋಷನ್ ತರಲಿ, ಅನಂತರ ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಆ ವರದಿಯ ಬಗ್ಗೆ ನಮಗೆ ಗೊತ್ತಿಲ್ಲವೆಂದು ಮಾನ್ಯ ಸದಸ್ಯರುಗಳು ಹೇಳಿದರು. ಅದಕ್ಕೆ ನಾನು ಉತ್ತರವನ್ನು ಕೊಡಬೇಕಾಗುತ್ತದೆ.

MR. SPEAKER : Please. I think, you should discipline your Members. It is the height of it. I don't tolerate. Please ask your Chief Whip.

ಶಾಸನ ರಚನಾ ಕಾರ್ಯಕಲಾಪ

ವಿಧೇಯಕಗಳ ಮಂಡನೆ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ 1998 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, 1998ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1998ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.